ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 57-61
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ನೀರು ಸರಬರಾಜು ಯೋಜನೆಯ ಅನುಷ್ಠಾನದಲ್ಲಿ ನಗರ ಸ್ಥಳೀಯ ಸರ್ಕಾರದ ಪಾತ್ರ: ಮಂಡ್ಯ ಜಿಲ್ಲೆಯನ್ನು ಅನುಲಕ್ಷಿಸಿ

**ಬಸವರಾಜು ವೈ. ಎಸ್**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Abstract:**
*ಈ ಸಂಶೋಧನಾ ಲೇಖನವು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿನ ನೀರು ಸರಬರಾಜಿನ ಪೂರೈಕೆಗಳ ಮೇಲೆ ಕೇಂದ್ರೀಕೃತವಾಗಿದೆ ಹಾಗೂ ನೀರು ಸರಬರಾಜಿಗಾಗಿ ತಗುಲಿದ ವೆಚ್ಚ ಮತ್ತು ಅದರಿಂದಾದ ಆದಾಯವನ್ನು ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನಕ್ಕೆ ಮಂಡ್ಯ ಜಿಲ್ಲೆಯ ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಕೃಷ್ಣರಾಜಪೇಟೆ ತಾಲೂಕುಗಳ ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.*

**Keywords:** *ಮಂಡ್ಯ ಜಿಲ್ಲೆ, ಸ್ಥಳೀಯ ಸರ್ಕಾರ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ನೀರು ಸರಬರಾಜು.*

## ಪೀಠಿಕೆ

ಪ್ರಾಚೀನ ಕಾಲದಿಂದಲೂ ಸ್ಥಳೀಯ ಸ್ವಯಂ ಆಡಳಿತವು ತನ್ನದೇ ಪರಂಪರೆಯನ್ನು ಹೊಂದಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪಟ್ಟಣ ಪ್ರದೇಶಗಳ ಕುರಿತಾದ ಮಾಹಿತಿ ಲಭ್ಯವಿದ್ದು, ಆ ಸಮಯದಲ್ಲೂ ಕೂಡ ಪೌರಾಡಳಿತ ಅಸ್ತಿತ್ವವಿತ್ತೆಂದು ಇತಿಹಾದಿಂದ ತಿಳಿಯಬಹುದಾಗಿದೆ. ಆ ಕಾಲದಲ್ಲಿ ರಾಜ್ಯಾಡಳಿತವು ರಾಜರ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಆದರೂ ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮನ್ನಣೆ ಇತ್ತು ಇಂದಿನ ಪ್ರಜಾಪ್ರಭುತ್ವ ಮಾದರಿಯ ಸರ್ಕಾರದಲ್ಲಿಯೂ ಸಹ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಇಂದು ಮಾನ್ಯತೆ ದೊರೆತಿದೆ. ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯು ಭಾಗ 9ಎ ನಲ್ಲಿ 243ಪಿ ವಿಧಿಯಿಂದ 243ಜಡ್‌ಜಿ ವಿಧಿಯವರೆಗೆ ನಗರ ಸ್ಥಳೀಯ ಸರ್ಕಾರಗಳ ರಚನೆಯ ವಿವರಣೆಯನ್ನು ನೀಡಲಾಗಿದೆ.

ಭಾರತ ಸಂವಿಧಾನದ 12ನೇ ಅನುಸೂಚಿಯು ನಗರ ಸ್ಥಳೀಯ ಸರ್ಕಾರಗಳ ಅಧಿಕಾರ ಮತ್ತು ಕಾರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಿದೆ. ಭಾಗ 9ಎ ನಲ್ಲಿ ನೀಡಿರುವ ವಿವರಗಳ ಆಧಾರದ ಮೇಲೆ ಕರ್ನಾಟಕ ಸರ್ಕಾರವು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಹಾಗೂ ಕರ್ನಾಟಕ ಪುರಸಭೆ (ಮುನ್ಸಿಪಾಲಿಟಿ) ಕಾಯ್ದೆ 1966ರ ಕಾಯ್ದೆಯಲ್ಲಿ ಅಗತ್ಯವಾದ

**Please cite this article as:** ಬಸವರಾಜು ವೈ.ಎಸ್. (2024). ನೀರು ಸರಬರಾಜು ಯೋಜನೆಯ ಅನುಷ್ಠಾನದಲ್ಲಿ ನಗರ ಸ್ಥಳೀಯ ಸರ್ಕಾರದ ಪಾತ್ರ: ಮಂಡ್ಯ ಜಿಲ್ಲೆಯನ್ನು ಅನುಲಕ್ಷಿಸಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(6), 57–61.

ಬದಲಾವಣೆ ತಂದಿತು. ಕರ್ನಾಟಕದಲ್ಲಿ ನಗರ ಸ್ಥಳೀಯ ಸರ್ಕಾರವನ್ನು 3 ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಪುರಸಭೆ (ಮುನ್ಸಿಪಾಲಿಟಿ)ಯೂ ಒಂದಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರು ಸರಬರಾಜು ಒದಗಿಸಲು ಎರಡು ದಶಕಗಳ ಹಿಂದೆ 6,879 ಕೊಳವೆ ಬಾವಿ ಹಾಗೂ 150 ಕೆರೆ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಈ ಯೋಜನೆಗಾಗಿ ಅನುಕ್ರಮವಾಗಿ ರೂ. 109.36 ಲಕ್ಷ ಹಾಗೂ ರೂ. 99.17 ಲಕ್ಷ ವೆಚ್ಚ ಮಾಡಲಾಯಿತು. ಅದೇ ರೀತಿ ಯೋಜನಾ ಲೆಕ್ಕ ಶೀರ್ಷಿಕೆಯಲ್ಲಿ ಅನುಕ್ರಮವಾಗಿ ರಾಜ್ಯ ಹಾಗೂ ಕೇಂದ್ರ ವಲಯದಲ್ಲಿ ಅನುಕ್ರಮವಾಗಿ ರೂ. 56 ಲಕ್ಷ ಹಾಗೂ ರೂ.36.05 ಲಕ್ಷ ವೆಚ್ಚಮಾಡಿ 160 ಕೆರೆನೀರು ಸರಬರಾಜು ಯೋಜನೆ ಹಾಗೂ 103 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

**ಉದ್ದೇಶಗಳು**

- ನೀರು ಸರಬರಾಜು ಯೋಜನೆಯ ಅನುಷ್ಠಾನದಲ್ಲಿ ನಗರ ಸ್ಥಳೀಯ ಸರ್ಕಾರದ ಪಾತ್ರವನ್ನು ತಿಳಿಯುವುದು.
- ನೀರು ಸರಬರಾಜು ಯೋಜನೆಗೆ ತಗುಲಿದ ವೆಚ್ಚ ಮತ್ತು ಆದಾಯವನ್ನು ವಿಶ್ಲೇಷಿಸುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಮಂಡ್ಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದೊರೆತ ದಾಖಲೆಗಳು, ವಾರ್ಷಿಕ ವರದಿಗಳು, ಲೇಖನಗಳು ಹಾಗೂ ವಿವಿಧ ಗ್ರಂಥಗಳನ್ನು ಮಾಹಿತಿಗಾಗಿ ಬಳಸಿಕೊಳ್ಳಾಗಿದೆ.

**ಮಾಹಿತಿ ವಿಶ್ಲೇಷಣೆ**


ಪ್ರಸ್ತುತ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಕ್ರೋಢೀಕರಸಲಾಯಿತು. ನಂತರ ಪಟ್ಟಿಮಾಡಿ ವಿಶ್ಲೇಷಿಸಲಾಗಿದೆ.

**ಪಟ್ಟಿ 1: ಮಂಡ್ಯ ಜಿಲ್ಲೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ನೀರು ಸರಬರಾಜಿನ ಆದಾಯ ಮತ್ತು ವೆಚ್ಚದ ವಿವರ (1998–2000)**


| ತಾಲೂಕುಗಳು | ಆದಾಯ (ಲಕ್ಷ ರೂಗಳಲ್ಲಿ) | ವೆಚ್ಚ (ಲಕ್ಷರೂಗಳಲ್ಲಿ) |
|---|---|---|
| ಮಂಡ್ಯ | 3,93,698 | 18,04,007 |
| ಮದ್ದೂರು | 1,030,340 | 6,99,150 |
| ಶ್ರೀರಂಗಪಟ್ಟಣ | 2,52,682 | 6,94.576 |
| ಮಳವಳ್ಳಿ | 2,04,000 | 5,95,043 |
| ಕೆ.ಆರ್.ಪೇಟೆ | 5,00,000 | 4,70,000 |
| ನಾಗಮಂಗಲ | 2,063,711 | 5,11,882 |
| ಪಾಂಡವಪುರ | 1,16,512 | 4,73,526 |

**ಆಧಾರ:** ಮಂಡ್ಯ ಜಿಲ್ಲಾ ಗೆಜೆಟಿಯರ್

**ರೇಖಾಚಿತ್ರ 1: ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ನೀರು ಸರಬರಾಜಿನ ಆದಾಯ ವಿವರ**




**ರೇಖಾಚಿತ್ರ – 2 ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ನೀರು ಸರಬರಾಜಿನ ವೆಚ್ಚದ ವಿವರ**



**ಮಂಡ್ಯ ನಗರ ಸಭೆ**

ಮಂಡ್ಯ ನಗರ ಸಭೆಯು ಪೌರಸಮಿತಿಯಾಗಿ 1898ರಲ್ಲಿ ಸ್ಥಾಪನೆಯಾಯಿತು. ನಂತರ 1910ರಲ್ಲಿ ಪುರಸಭೆಯಾಗಿ ಮಾರ್ಪಟ್ಟಿತು. 1955–1956ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ 8ನೇ ನೀರು ನಾಲೆ ಮೂಲಕ ಭಾಗಶಃ ನಗರ ಪ್ರದೇಶಕ್ಕೆ ನೀರು ವಿತರಣೆ ಪ್ರಾರಂಭವಾಯಿತು. ನಂತರ 1980–1981ನೇ ಸಾಲಿನಿಂದ 1ನೇ ಹಂತದ ಕಾವೇರಿ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು 13.5 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯಡಿ ನಗರಸಭೆ ವ್ಯಾಪ್ತಿಯಲ್ಲಿ ನೀರು ಸಂಗ್ರಹಣೆಗಾಗಿ 17 ಜೈವಿಕ ಹೆಡ್ ಸಂಗ್ರಹತೆಗಳು ನಿರ್ಮಾಣಗೊಂಡಿವೆ. ನಗರದಲ್ಲಿ 525 ಸಾರ್ವಜನಿಕ ನಲ್ಲಿ 5,385 ಗೃಹ ಬಳಕೆ ನಲ್ಲಿ ಹಾಗೂ 216 ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಲಾಗಿದೆ. ಪ್ರತಿದಿನ 2.5 ದಶಲಕ್ಷ ಗ್ಯಾಲನ್ ನೀರು ಪೂರೈಕೆಯಾಗುತ್ತದೆ. 1998–1999ರಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚ ರೂ. 18,04,007 ರೂಗಳು ಹಾಗೂ ನಗರ ಸಭೆಗೆ ತೆರಿಗೆ ಮೂಲಕ ಸಂದಾಯವಾದ ಹಣ ರೂ. 3.93.98 ಆಗಿದಿತ್ತು.

**ಮದ್ದೂರು ಪುರಸಭೆ**

1958ರ ಮೈಸೂರು ಮುನ್ಸಿಪಾಲ್ ಕಾಯ್ದೆಯನ್ವಯ ಮದ್ದೂರು ಪುರಸಭೆಯು 1951ರ ನಂತರ ಅಸ್ಥಿತ್ವಕ್ಕೆ ಬಂತು (ಅದಕ್ಕೂ ಮೊದಲು ಮದ್ದೂರು ಪಟ್ಟಣವು ಉಪ–ಪುರಸಭೆ ಆಡಳಿತಕ್ಕೆ ಒಳಪಟ್ಟಿತ್ತು). ಪುರಸಭೆಯ 1918 ರಿಂದಲೂ ಪಟ್ಟಣಕ್ಕೆ ನೀರು ಸರಬರಾಜಿನ ಜವಾಬ್ಧಾರಿಯನ್ನು ನಿರ್ವಹಿಸಿಕೊಂಡು ಬಂದಿದೆ. ಶಿಂಷಾ ನದಿ ಹಾಗೂ ಕೊಳವೆ ಬಾವಿಗಳು ಪಟ್ಟಣದ ಮುಖ್ಯ ನೀರಿನ ಮೂಲಗಳಾಗಿವೆ. ಪುರಸಭೆಯು 1989ರಲಿ ಪಂಪಿಂಗ್ ಸ್ಟೇಪನ್ ಹಾಗೂ 3 ನೀರು ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಈ ವ್ಯಾಪ್ತಿಯಲ್ಲಿ 142 ಕೊಳವೆ ಬಾವಿಗಳನ್ನು ಕೊರೆಸಿದ್ದು 120 ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಮತ್ತು 22ಕ್ಕೆ ಮೋಟರುಗಳನ್ನು ಅಳವಡಿಸಲಾಗಿದೆ. ಕೊಳವೆ ಬಾವಿಯ ನೀರು ಬಹುತೇಕ ಉಪ್ಪಾಗಿದ್ದು, ಕುಡಿಯಲು ಯೋಗ್ಯವಾಗಿಲ್ಲ.

ಹಾಗಾಗಿ ಪ್ರಸ್ತುತ ಮದ್ದೂರು ಪಟ್ಟಣಕ್ಕೆ ಹೊಸದಾಗಿ ಮಳವಳ್ಳಿಯ ಶಿವನಸಮುದ್ರದಿಂದ ಕುಡಿಯುವ ನೀರಿನ ಯೋಜನೆಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ 17 ದಿನಕ್ಕೆ ದಶಲಕ್ಷ ಲೀಟರ್ ಸಾಮರ್ಥ್ಯದ 22 ಕೋಟಿ 36 ಲಕ್ಷ ರೂ.ಗಳ ಕಾಮಗಾರಿ ಪ್ರಗತಿಯಲ್ಲಿದೆ. 1998–1999 ಹಾಗೂ 1999–2000 ಸಾಲಿನಲ್ಲಿ ನೀರಿನ ತೆರಿಗೆ ರೂಪದಲ್ಲಿ ರೂ. 10,30,340 ಸಂಗ್ರಹವಾಗಿತ್ತು. ಹಾಗೂ ಯೋಜನೆಗಾಗಿ 6,99,150 ರೂಗಳನ್ನು ವೆಚ್ಚ ಮಾಡಿತ್ತು.

**ಶ್ರೀರಂಗಪಟ್ಟಣ ಪುರಸಭೆ**

ಶ್ರೀರಂಗಪಟ್ಟಣ ಪುರಸಭೆಯು 1918ರಲ್ಲಿ ಪ್ರಾರಂಭವಾಯಿತು. ನದಿಗೆ ಸಬ್‌ಮುರ್ಸಿಬಲ್ ಪಂಪು ಮತ್ತು ಕೈಪಂಪು ಅಳವಡಿಸಿ ಕೊಳವೆ ಬಾವಿಯಿಂದ ನೀರನ್ನು ಪಟ್ಟಣಕ್ಕೆ ಒದಗಿಸಲಾಗುತ್ತಿದೆ. ಸುರಕ್ಷಿತ ನೀರು ಸರಬರಾಜು ಯೋಜನೆಯನ್ನು 01–12–1934ರಲ್ಲಿ ಪ್ರಾರಂಭಿಸಿ 03–04–1935ರಲ್ಲಿ ಪೂರ್ಣಗೊಳಿಸಲಾಯಿತು.

1972ರಲ್ಲಿ 4 ಓವರ್ ಹೆಡ್ ಸಂಗ್ರಹಕಗಳನ್ನು ನಿರ್ಮಿಲಾಯಿತು. ಅವುಗಳಿಗೆ ಕ್ಷಮತೆ 2.25 ಗ್ಯಾಲಿಸ್ ಹೆಚ್ಚಿನ ಪೂರೈಕೆಗಾಗಿ 'ಗೋಸಾಯಿಗಾಟ್' ಬಳಿ ಪಂಪಿಂಗ್ ಸ್ಟೇಷನ್ ನಿರ್ಮಾಣವಾಗುತ್ತಿದೆ. ಶ್ರೀರಂಗಪಟ್ಟಣದಲ್ಲಿರುವ ಖಾಸಗಿ ನಲ್ಲಿಗಳಲ್ಲಿನ ಸಂಖ್ಯೆ 2.655 ಮತ್ತು ಸಾರ್ವಜನಿಕ ನಲ್ಲಿಗಳು 300 ಈಗ ದಿನನಿತ್ಯ 5 ಲಕ್ಷ ಗ್ಯಾಲಿಸ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. 1999–2000ರಲ್ಲಿ

ಸುರಕ್ಷಿತ ನೀರು ಸರಬರಾಜುಗಾಗಿ ತಗುಲಿರುವ ವೆಚ್ಚ 6,94,576 ಆಗಿದ್ದು ನೀರಿನ ತೆರಿಗೆ ರೂಪದಲ್ಲಿ ರೂ.2,52,683 ಸಂಗ್ರಹವಾಗಿದೆ.

**ಮಳವಳ್ಳಿ ಪುರಸಭೆ**

ಮಳವಳ್ಳಿ ಪುರಸಭೆಯು 1903ರ ಹಿಂದೆಯೆ ಸ್ಥಾಪನೆಗೊಂಡಿದೆ. ಇಲ್ಲಿ ಪುರಸಭೆ ರಚನೆಗೊಳ್ಳುವ ಪೂರ್ವದಲ್ಲಿಯೇ ಪಟ್ಟಣಕ್ಕೆ ಕುನ್ನೀರು ಕಟ್ಟೆಯಿಂದ ನೀರನ್ನು ಬಳಸಲಾಗುತ್ತಿತ್ತು. ಆದರೆ ಈಗ ಪಟ್ಟಣಕ್ಕೆ ಮಾರೇಹಳ್ಳಿ ಕೆರೆಯಿಂದ ನೀರು ಸರಬರಾಜು ಆಗುತ್ತಿದೆ. ಮಾರೇಹಳ್ಳಿ ಕೆರೆಯ ನೀರನ್ನು ಮೋಟಾರ್ ಪಂಪುಗಳನ್ನು ಅಳವಡಿಸಿ ಕೊಳಾಯಿಗಳ ಮೂಲಕ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ದಿನನಿತ್ಯ ಸರಬರಾಜಾಗುವ ನೀರಿನ ಪ್ರಮಾಣ 20 ಲಕ್ಷ ಲೀಟರ್‌ಗಳಾಗಿವೆ.

**ಕೆ.ಆರ್.ಪೇಟೆ ಪುರಸಭೆ**

ಪಟ್ಟಣ ಪಂಚಾಯಿತಿಯಾಗಿದ್ದ ಕೆ.ಆರ್.ಪೇಟೆ 1905ರಲ್ಲಿ ಪುರಸಭೆಯಾಯಿತು. ಪ್ರಸ್ತುತ ನೀರು ಹೇಮಾವತಿ ನದಿಯಿಂದ ಸರಬರಾಜುಗೊಳ್ಳುತ್ತಿದೆ. 1986ರಲ್ಲಿ 75 ಲಕ್ಷ ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್ ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ವತಿಯಿಂದ ನಿರ್ಮಾಣಗೊಂಡಿದೆ. 1997ರಲ್ಲಿ ಕಟ್ಟಿದ 50 ಸಾವಿರ ಗ್ಯಾಲಿನ್ ಕ್ಷಮತೆಯ ಎರಡು ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ಅದರ ಮೂಲಕ ನೀರು ಸರಬರಾಜನ್ನು ಪ್ರಾರಂಭಿಸಲಾಯಿತು. 1997ರಲ್ಲಿ ಪಟ್ಟಣದಲ್ಲಿ 150 ಸಾರ್ವಜನಿಕ, ಹಾಗೂ 1100 ಖಾಸಗಿ ನಲ್ಲಿಗಳಿದ್ದವು. ದಿನನಿತ್ಯ ಸರಾಸರಿ 2,25,000 ಲೀಟರ್ ನೀರನ್ನು 24,000 ಜನರಿಗೆ ಒದಗಿಸಲಾಗುತ್ತಿದೆ. ವಾರ್ಷಿಕವಾಗಿ ನೀರು ಸರಬರಾಜು ವ್ಯವಸ್ಥಗೆ ತಗಲುವ ವೆಚ್ಚ 4,70,000 ಹಾಗೂ ವಾರ್ಷಿಕ ಆದಾಯ ರೂ.5,00,000 ಗಳಾಗಿವೆ.

**ನಾಗಮಂಗಲ ಪುರಸಭೆ**

ನಾಗಮಂಗಲ ಪಟ್ಟಣ ಪಂಚಾಯ್ತಿ 1945ರಲ್ಲಿ ಸ್ಥಾಪನೆಗೊಂಡಿತು. ಆದರೆ 1995 ಸರ್ಕಾರಿ ಆದೇಶದ ಮೇರೆಗೆ ಅದನ್ನು ಪುರಸಭೆಯನ್ನಾಗಿ ಪರಿವರ್ತಿಸಲಾಯಿತು. ಪಟ್ಟಣಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಪುರಸಭೆಯು ನಿರ್ವಹಿಸುತ್ತಿದ್ದು ನಲ್ಲಿಗಳ ಮೂಲಕ ಪ್ರತಿದಿನ ನೀರನ್ನು ಸರಬರಾಜು ಮಾಡಲಾಗುತ್ತಿದೆ.

**ಪಾಂಡವಪುರ ಪುರಸಭೆ**

ಪಾಂಡವಪುರ ಪಟ್ಟಣ ಪಂಚಾಯಿತಿ 1935ರಲ್ಲಿ ಸ್ಥಾಪನೆಯಾಯಿತು. ಆದರೆ 1995ರಲ್ಲಿ ಪುರಸಭೆಯಾಗಿ ಮಾರ್ಪಾಡಾಯಿತು. ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ 1933ರಲ್ಲಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಪಂಪಿಂಗ್ ಸ್ಟೇಷನ್ ಅನ್ನು ನಿರ್ಮಿಸಿ 1934ರಲ್ಲಿ ನೀರು ಸರಬರಾಜು ಪ್ರಾರಂಭವಾಯಿತು. ಕೊಳವೆ ಬಾವಿಯನ್ನು ಕೊರೆಸಿ ಅವುಗಳಲ್ಲಿ ಕೆಲವು ವಿದ್ಯುತ್ ಪಂಪ್ ಇನ್ನೂ ಕೆಲವು ಕೈಪಂಪು ಅಳವಡಿಸಿ ನೀರು ಸರಬರಾಜಿಗೆ ವ್ಯವಸ್ಥೆ ಮಾಡಲಾಯಿತು. 1990ರಲ್ಲಿ 2.5 ಲಕ್ಷ ಲೀಟರ್ ಹಾಗೂ 5 ಲಕ್ಷ ಲೀಟರ್ ಕ್ಷಮತೆಯ ಎರಡು ಸಂಗ್ರಹಗಾರಗಳನ್ನು ಕಟ್ಟಿಸಿ ಅವುಗಳಿಂದ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಪಟ್ಟಣದಲ್ಲಿ 240 ಸಾರ್ವಜನಿಕ ನಲ್ಲಿಗಳು ಮತ್ತು 2350 ಖಾಸಗಿ ನಲ್ಲಿಗಳು ಇವೆ. ನೀರು ಸರಬರಾಜಿಗಾಗಿ 1999–2000ರಲ್ಲಿ 4,73,526 ರೂ. ವೆಚ್ಚವಾಗಿದ್ದು, ಪುರಸಭೆಗೆ 1,16,512 ರೂ.ಗಳು ನೀರಿನ ತೆರಿಗೆ ರೂಪದಲ್ಲಿ ಸಂದಾಯವಾಗಿದೆ.

**ಉಪಸಂಹಾರ**

ಭಾರತ ಸರ್ಕಾರವು ಸುಗಮ ಆಡಳಿತಕ್ಕಾಗಿ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಿದೆ. ಅದರ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಅಂತಹ ಯೋಜನೆಗಳಲ್ಲಿ ನೀರು ಸರಬರಾಜು ಯೋಜನೆ ಪ್ರಮುಖವಾದುದಾಗಿದೆ. ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆಗಾಗಿ ಹಲವಾರು ಕೋಟಿಗಳನ್ನು ವ್ಯಯಿಸಲಾಗಿದೆ. ಆದರೆ ಪ್ರಸ್ತುತ

ದಿನಗಳಲ್ಲಿ ಪ್ರತಿ ಮನೆಗಳಿಗೆ ನಲ್ಲಿಗಳನ್ನು ಅಳವಡಿಸಲಾಗಿದೆ. ಆದರೆ ನೀರು ಸಂಗ್ರಹಕಗಳ ಸ್ವಚ್ಛಗೊಳಿಸುವಲ್ಲಿ ಪರಿಣಾಮಕಾರಿಯಾಗಿಲ್ಲ ಹಾಗೂ ನೀರು ಪೋಲಾಗುವಿಕೆಯನ್ನು ತಡೆಗಟ್ಟಲು ಪ್ರತಿ ನಲ್ಲಿಗಳ ಪಕ್ಕದಲ್ಲಿ ಇಂಗುಗುಂಡಿಗಳನ್ನು ನಿರ್ಮಿಸುವುದು ಸೂಕ್ತವಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- *ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಂತರ್ಜಾಲ.* *https://kuwsdb.karnataka.gov.in/kn*
- *ಮಂಡ್ಯ ನಗರ ಸಭೆ ಅಂತರ್ಜಾಲ.* *http://www.mandyacity.mrc.gov.in/*
- *ನಾಗಮಂಗಲ ಪುರಸಭೆ ಅಂತರ್ಜಾಲ.* *http://www.nagamangalatown.mrc.gov.in/kn/about-tmc*
- ಪಾರ್ಥಸಾರಥಿ ಟಿ.ಎ. (2003). ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ.
- *ಪೌರಾಡಳಿತ ನಿರ್ದೇಶನಾಲಯದ ಅಂತರ್ಜಾಲ.* *http://www.municipaladmn.gov.in/*
- Slater, R., & Watson, J. (1989). Democratic decentralization or political consolidation: The case of local government reform in Karnataka. *Public Administration and Development*, *9*(2), 147–157. https://doi.org/10.1002/pad.4230090205
- Jayal, N. G., Prakash, A., & Sharma, P. (2006). *Local governance in India : decentralization and beyond*. https://ci.nii.ac.jp/ncid/BA80394443
- Idiculla, M. (2020). Unpacking Local Self-Government: The uncertain power of cities in the Indian Constitution. *Verfassung Und Recht in Übersee*, *53*(1), 30–50. https://doi.org/10.5771/0506-7286-2020-1-30